# ಯತ್ಯಾಶ್ರಮಿ

ಪ್ರಾಚೀನ ಕಾಲದಲ್ಲಿ ಆಶ್ರಮ ಚತುಷ್ಟಯಗಳು ಬಳಕೆಯಲ್ಲಿದ್ದವು. ಕ್ರಿ.ಶ. 5ನೆಯ ಶತಮಾನದವರೆಗೂ ಚತುರಾಶ್ರಮದ ನೆಲೆಗಳು ಭಾರತದಲ್ಲಿ ಇದ್ದವು. ಆಗಿನ ಕಾಲದಲ್ಲಿ ರಚಿತವಾದ ಸಂಸ್ಕೃತ ಕಾವ್ಯವನ್ನು ಪರಿಶೀಲಿಸಿದರೆ, ನಾಲ್ಕು ಆಶ್ರಮಗಳ ಸಂಗತಿಗಳು ನಮಗೆ ಕಾಣಬರುತ್ತವೆ. ಇದು ಅತ್ತ ಧರ್ಮಶಾಸ್ತ್ರಕ್ಕೂ ಇತ್ತ ಲೋಕಶಾಸ್ತ್ರಕ್ಕೂ ಅನ್ವಯ ಆಗುತ್ತಿತ್ತು. ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಮತ್ತು ಯತಿ ಎಂಬಿವು ನಾಲ್ಕು ಆಶ್ರಮಗಳು. ಬ್ರಹ್ಮಚಾರಿ, ಗೃಹಸ್ಥ ಮತ್ತು ವಾನಪ್ರಸ್ಥದ ವಿವರಗಳು ನಮಗೆ ಹೇಗೋ ಗೊತ್ತಿವೆ. ಆದರೆ, 'ಯತ್ಯಾಶ್ರಮ'ದ ಸೂಕ್ಷ್ಮ ವಿವರಗಳು ನಮ್ಮ ಜನಕ್ಕೆ ಹೆಚ್ಚಾಗಿ ತಿಳಿದಿಲ್ಲ. ಪ್ರಾಚೀನ ಸಂಸ್ಕೃತಿಯನ್ನು ತಿಳಿಯಬಯಸುವವರೂ ಅಧ್ಯಾತ್ಮಸಾಧಕರೂ ಜ್ಞಾನಶಾಸ್ತ್ರಮೋಹಿತರೂ ಅಗತ್ಯವಾಗಿ ಯತ್ಯಾಶ್ರಮದ ವಿವರಗಳನ್ನು ತಿಳಿಯುವುದು ಅವಶ್ಯ. ಬ್ರಹ್ಮಚರ್ಯಾಶ್ರಮವು ಪ್ರಧಾನವಾಗಿ ಗುರುಕುಲ ಶಿಕ್ಷಣವನ್ನು ಪ್ರತಿನಿಧಿಸುತ್ತಿತ್ತು. ವಿದ್ಯಾರ್ಥಿಯು ಗುರುಕುಲದಲ್ಲಿ ಲೌಕಿಕ–ವೈದಿಕ ಶಿಕ್ಷಣ ಮುಗಿಸಿ, ಪ್ರಬುದ್ಧನಾಗಿ ಗೃಹಸ್ಥಾಶ್ರಮ ಪ್ರವೇಶ ಮಾಡಬೇಕಿತ್ತು. ಆತ ಗೃಹಸ್ಥಜೀವನ ನಡೆಸಿ, ವೃದ್ಧನಾದ ಮೇಲೆ ವಾನಪ್ರಸ್ಥ ಸ್ವೀಕಾರ ಮಾಡುತ್ತಿದ್ದ. ವಾನಪ್ರಸ್ಥ ಆಶ್ರಮದಲ್ಲಿ ಇರುವಾಗಲೇ 'ಯತಿ' ಆಗಬೇಕೆಂದು ಅಪೇಕ್ಷೆ ಬಂದರೆ ನಾಲ್ಕನೆಯ ಆಶ್ರಮವಾದ 'ಯತ್ಯಾಶ್ರಮ'ವನ್ನು ಸ್ವೀಕಾರ ಮಾಡಬಹುದಾಗಿತ್ತು. ಆಧುನಿಕ ಕಾಲದಲ್ಲೂ 'ಯತ್ಯಾಶ್ರಮ'ವನ್ನು ಸ್ವೀಕರಿಸಿದವರು ನಮ್ಮಲ್ಲುಂಟು. ಯತ್ಯಾಶ್ರಮಿಗಳು ನಾಲ್ಕು ಬಗೆಯವರು. ಕುಟೀಚಕ, ಬಹೂದಕ, ಹಂಸ ಮತ್ತು ಪರಮಹಂಸ. ಕುವೆಂಪು ಅವರ ಕವಿತೆಗಳಲ್ಲಿ ಕುಟೀಚಕ ಮತ್ತು ಬಹೂದಕ ಎಂಬ ಮಾತುಗಳು ಬಳಕೆಯಾಗಿವೆ. ಇದರ ಜತೆಗೆ ಹಂಸ, ಪರಮಹಂಸ ಎಂಬಿವು ಸಾಮಾನ್ಯವಾಗಿ ಬಳಕೆಯಲ್ಲಿ ಇರುವುದುಂಟು. ಆದರೆ, ನಾಲ್ಕು ಬಗೆಯ 'ಯತಿ'ಗಳ ಲಕ್ಷಣ, ಸ್ವರೂಪ, ಸಾಧನೆಗಳ ಬಗೆಗೆ ಹೆಚ್ಚಾಗಿ ತಿಳಿದಿರುವುದಿಲ್ಲ. ಈಗ ಒಂದೊಂದೇ ಸಂಗತಿಯನ್ನು ಗಮನಿಸೋಣ.

## ಕುಟೀಚಕ

ಕುಟಿ ಎಂದರೆ ಗುಡಿ. ಒಂದೇ ಕಡೆ ನೆಲೆಸಿ ಸಾಧನೆಯಲ್ಲಿ ಇರುವ ಯತಿಯನ್ನು ಈ ಪದ ಸಂಕೇತಿಸುತ್ತದೆ. ಈತ ಶಿಖೆ ಮತ್ತು ಯಜ್ಞೋಪವೀತ ಧರಿಸಿರುತ್ತಾನೆ; ನೋಡಲು ಶಂಕರನಂತೆ ವಿರಾಜಮಾನನಾಗಿರುತ್ತಾನೆ. ಕೈಯಲ್ಲಿ ದಂಡ–ಕಮಂಡಲು ಮತ್ತು ಭಿಕ್ಷಾಪಾತ್ರೆಗಳನ್ನು ಹಿಡಿದಿದ್ದಾನೆ. ಈತ ಕಾಷಾಯ ವಸ್ತ್ರವನ್ನು ಧರಿಸಿ ಸಾತ್ವಿಕನಾಗಿ ಇರುತ್ತಾನೆ. ಬೆಳಿಗ್ಗೆ–ಮಧ್ಯಾಹ್ನ ಮತ್ತು ಸಂಜೆ ಮೂರು ಕಾಲಗಳಲ್ಲೂ ಹಣೆಯಲ್ಲಿ ಭಸ್ಮವನ್ನು ಧರಿಸಿ ಶಿವಲಿಂಗದ ಅರ್ಚನೆ, ಗಾಯತ್ರೀ ಜಪ ಮಾಡುವುದು ಕುಟೀಚಕನ ದಿನಂಪ್ರತಿಯ ನಡಾವಳಿ. ಇಂಥವನು ಸ್ವಜಾತಿ ಮತ್ತು ಬಂಧುಗಳಲ್ಲಿ ಮಾತ್ರ ಭಿಕ್ಷಾನ್ನವನ್ನು ಪಡೆದು ಅದನ್ನು ಭುಂಜಿಸುವುದು ಕಡ್ಡಾಯ. ಇಂಥವರನ್ನು ಕುಟೀಚಕರೆಂದು ಕರೆಯುತ್ತಿದ್ದರು.

## ಬಹೂದಕ

ಒಂದೇ ಕಡೆ ಬಹುಕಾಲ ನಿಲ್ಲದಿರುವವನೇ ಬಹೂದಕ. ಇಲ್ಲಿ 'ಬಹೂದಕ' ಎಂಬ ಮಾತಿದೆಯಷ್ಟೆ. ಬಹು+ಉದಕ ಎಂದರೆ ಹೆಚ್ಚು ನೀರನ್ನು ಬಳಸುತ್ತಿದ್ದುದರಿಂದ ಈ ಮಾತು ಬಂದಿರುವಂತೆ ತೋರುತ್ತದೆ. ಇಂಥ ಯತಿಯು ಶಿಖೆ ಮತ್ತು ಜನಿವಾರವನ್ನು ಹೊಂದಿದ್ದು ಕೈಯಲ್ಲಿ ತ್ರಿದಂಡವಿರುವುದು ಸ್ಪಷ್ಟ. ಮತ್ತೊಂದು ಕೈಯಲ್ಲಿ ಮಣ್ಣಿನ ಪಾತ್ರೆಯನ್ನೋ ಮರದ ಪಾತ್ರೆಯನ್ನೋ ಇಲ್ಲವೇ ಕಂಚಿನ ಪಾತ್ರೆಯನ್ನೋ ಹಿಡಿದು ಭಿಕ್ಷೆಗಾಗಿ ಈತ ಹೋಗಬೇಕಾಗಿತ್ತು. ಈತನು ಕಂಥೆ, ಕೃಷ್ಣಾಜಿನ, ಕೊಡೆ, ಪಾದುಕೆ, ಸೂಜಿ, ಕತ್ತರಿ ಯೋಗಪಟ್ಟಕ್ಕೆ ಸಂಬಂಧಿಸಿದ ಪರಿಕರವನ್ನು ಹೊಂದಿರುತ್ತಿದ್ದ. ಕೊರಳಲ್ಲಿ ರುದ್ರಾಕ್ಷಿ, ಹಣೆಯಲ್ಲಿ ವಿಭೂತಿ ಧರಿಸಿ ಮೂರೂ ಹೊತ್ತು ಶಿವಲಿಂಗಾರ್ಚನೆ–ಗಾಯತ್ರೀ ಮಂತ್ರವನ್ನು ಜಪಿಸುವುದು ಅಗತ್ಯ. ಬಹೂದಕ ವೇದಾಧ್ಯಯನ ಮಾಡಬೇಕಿಲ್ಲ. ಇವನು ತಮ್ಮ ಬಂಧುಗಳಲ್ಲಿ ಅಥವ ಸ್ವಕುಟುಂಬದಿಂದ ಭಿಕ್ಷೆಯನ್ನು ಬೇಡುವಂತಿರಲಿಲ್ಲ. ಬೇರೆ ಏಳು ಮನೆಗಳಲ್ಲಿ ಭಿಕ್ಷಾನ್ನವನ್ನು ತಂದು, ಉಂಡು ಸದಾ ಧ್ಯಾನ ತತ್ಪರನಾಗಿರಬೇಕಾಗಿತ್ತು.

## ಹಂಸ

ಈತ ಶಿಖೆ ಮತ್ತು ಜನಿವಾರಗಳನ್ನು ಇಟ್ಟುಕೊಳ್ಳಬಾರದು. ಬಿದಿರಿನ ದಂಡವನ್ನು ಹಿಡಿದು, ಕಮಂಡಲು, ಮಣ್ಣಿನಪಾತ್ರೆ, ಕಂಥೆ, ಧೋತ್ರಬಹಿರ್ವಾಸಗಳನ್ನು ಹೊಂದಿರಬೇಕಾಗಿತ್ತು. ಹಣೆಯಲ್ಲಿ ತ್ರಿಪುಂಡ್ರ ಧರಿಸಿ, ಕೊರಳಲ್ಲಿ ರುದ್ರಾಕ್ಷಿ ಧಾರಣೆ ಮಾಡಿರುವುದು ಕಡ್ಡಾಯ. ಶಿವನ ಆರಾಧನೆ ಮತ್ತು ಸಾವಿತ್ರೀ ಜಪಗಳನ್ನು ಮೂರು ಹೊತ್ತು ಮಾಡುತ್ತಿರಬೇಕು. ಭಿಕ್ಷಾನ್ನವನ್ನು ತಂದು ಎಂಟು ತುತ್ತು ಮಾತ್ರ ಊಟ ಮಾಡಬೇಕಾಗಿತ್ತು. ಹಂಸಯತಿಯು ಅಜಿಹ್ವ, ಷಂಡಕ, ಪಂಗು, ಅಂಧಕ, ಬಧಿರ ಮತ್ತು ಮುಗ್ಧ ಎಂಬ ಆರು ಗುಣಗಳನ್ನು ಹೊಂದಿರುವುದು ಕಡ್ಡಾಯ. ಇದು ಲೋಕವಿಲಕ್ಷಣಕ್ಕೆ ಅಗತ್ಯವಾಗಿತ್ತು. ಎಂಟು ವಿಧವಾದ ಮೈಥುನಗಳನ್ನು ತ್ಯಜಿಸಿರಬೇಕು. ಇಂಥ ಗುಣಗಳನ್ನು ಹೊಂದಿರುವವನೇ ಹಂಸಯತಿ.

## ಪರಮಹಂಸ

ಪರಮಹಂಸನಾದವನಿಗೆ ಶಿಖೆ, ಜನಿವಾರ, ನಿತ್ಯಕರ್ಮ, ತ್ರಿದಂಡ ಮತ್ತು ಕಮಂಡಲು ಮುಂತಾದ ಯಾವ ಬಗೆಯ ಪರಿಕರವೂ ಇರುತ್ತಿರಲಿಲ್ಲ. ಕಂಥೆ, ಕೌಪೀನ ವಸ್ತುಗಳನ್ನು ಶೀತದ ಬಾಧೆಗಾಗಿ ಮಾತ್ರ ಹೊಂದಿರಬೇಕಾಗಿತ್ತು. ಈತನು ಪಂಚ ವಿಧ ಸ್ನಾನಗಳಲ್ಲಿ ಭಸ್ಮಸ್ನಾನ ಮಾತ್ರ ಮಾಡಬೇಕಾಗಿತ್ತು. ಪ್ರಣಪೂರ್ವಕವಾದ ಹಂಸಮಂತ್ರವನ್ನು ಹೇಳುತ್ತ ತ್ರಿಪುಂಡ ಧಾರಣೆಯನ್ನು ಮಾಡಿಕೊಳ್ಳುವುದು ಅವಶ್ಯವಾಗಿತ್ತು. ಇವುಗಳ ಜತೆಗೆ ಷಟ್ ಪ್ರಾಣಾಯಾಮ, ನೂರಾ ಎಂಟು ಪ್ರಣವ ಜಪಮಾಡಿ ಏಕಾಂತವಾಸಿಯಾಗಿ ಸದಾ ಸಮಾಧಿನಿಷ್ಠನಾಗಿರಬೇಕಾಗಿತ್ತು. ಪಂಚ ವಿಧ ಭಿಕ್ಷೆ ಸ್ವೀಕರಿಸುವಂತಿರಲಿಲ್ಲ. ಯೋಗಕ್ಕೆ ಅನುಗುಣವಾಗಿ ಮಾತ್ರ ಭಿಕ್ಷೆಯನ್ನು ಸ್ವೀಕರಿಸುವುದು ಅಗತ್ಯವಾಗಿತ್ತು. ಚಾತುರ್ಮಾಸ ಆಚರಿಸುತ್ತ ಆತ್ಮಜ್ಞಾನದಲ್ಲಿ ಮುಳುಗಿ ಪೂರ್ವಾಶ್ರಮದ ಎಲ್ಲಾ ಆಚಾರಗಳನ್ನು ಬಿಟ್ಟವನೇ ಪರಮಹಂಸ ಯತಿ.

■ **ಪುರಂಜೀವಿ**

## ಮಾತೇ ಮುತ್ತು

- ನಿಮ್ಮ ಆಸೆಯಲ್ಲಿ ಎಷ್ಟು ತಾರುಣ್ಯವಿದೆಯೋ ಮತ್ತು ಆಗಲಿಲ್ಲವೋ ಅದೇ ನನಗೆ ಸಮಾಧಾನ ಕೊಡುತ್ತದೆ.
  —ರಾಬರ್ಟ್ ಬ್ರೌನಿಂಗ್
- ಎಂತಹವನಾದರೂ ಗರ್ವದಿಂದಲೇ ನಾಶ ಹೊಂದಿರುವುದು ಸೃಷ್ಟಿಯ ನಿಯಮ.
  —ಭರ್ತೃಹರಿ
- ಇದುವರೆಗಿನ ಚರಿತ್ರೆಯು ವರ್ಗ ಹೋರಾಟದ ಚರಿತ್ರೆಯೇ.
  —ಕಾರ್ಲ್ ಮಾರ್ಕ್ಸ್
- ಮನೆಗೆ ಮಾರಿ ಸೋಮಾರಿ.
  —ಪಂಜೆ ಮಂಗೇಶರಾವ್
- ಆಸೆಯೆಂಬುದು ಅರಸಂಗಲ್ಲದೇ ಶಿವಭಕ್ತನಿಗುಂಟೆ?
  —ಲಕ್ಕಮ್ಮ
- ಇತಿಹಾಸವು ಎಲ್ಲವನ್ನೂ ಜ್ಞಾಪಕದಲ್ಲಿಟ್ಟುಕೊಳ್ಳಬೇಕೆನ್ನುತ್ತದೆ. ಆದರೆ, ಸಾಹಿತ್ಯವು ಅನೇಕವನ್ನು ಮರೆತುಬಿಡುತ್ತದೆ.
  —ರವೀಂದ್ರನಾಥ ಟ್ಯಾಗೋರ್
- ಉತ್ಸಾಹಿಗೆ ಎಲ್ಲವೂ ಸುಲಭವೆಂದೇ ಅನುಭವಕ್ಕೆ ಬರುತ್ತದೆ.
  —ರಿಚರ್ಡ್
- ದಾನವನ್ನೂ ಪ್ರಾರ್ಥನೆಯನ್ನೂ ಗುಟ್ಟಾಗಿ ಮಾಡು.
  —ಏಸುಕ್ರಿಸ್ತ
- ಮಹಾತ್ಮರ ಮಹಾಸ್ವಪ್ನಗಳೆಂದರೆ ಭವಿಷ್ಯತ್ತಿನ ವಾಸ್ತವ ಸಿದ್ಧವಾಗುತ್ತದೆ.
  —ಕುವೆಂಪು